		ಕುಂದಗೋಳ	-	0.86	0.38
		ಶಿಗ್ಗಾಂವ	-	0.75	0.02
			1	4.20	1.157
2)	93-94	ಧಾರವಾಡ	1	2.23	2.466
		ಹುಬ್ಬಳ್ಳಿ	-	1.47	0.886
		ಕಲಘಟಗಿ	1	1.47	1.488
		ಕುಂದಗೋಳ	1	1.72	0.341
		ಶಿಗ್ಗಾಂವ	1	1.51	1,23
			4	8.40	6.411
3)	94-95	ಧಾರವಾಡ	1	1.20	2,08
		ಹುಬ್ಬಳ್ಳಿ	-	0.75	0.21
		ಕಲಘಟಗಿ	1	0.75	0.71
		ಕುಂದಗೋಳ	-	0.75	0.35
		ಶಿಗ್ಗಾಂವ	-	0.90	0.42
			2	4.35	3.77

ತುಂಗಾ ಮೇಲ್ದಂಡೆ ನಾಲೆಯ ಪ್ರಗತಿ ಹಾಗೂ ಅಂದಾಜು ವೆಚ್ಚ

770 - ಶ್ರೀ ಆಯನೂರು ಮಂಜುನಾಥ (ಹೊಸನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಂಗಾ ಮೇಲ್ದಂಡೆ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಯಿತು, ಈಗ ಯಾವ ಹಂತದಲ್ಲಿದೆ, ಎಷ್ಟು ಹಣವನ್ನು ಈವರೆಗೆ ವ್ಯಯ ಮಾಡಲಾಗಿದೆ, ಹಾಗೂ ಇದರ ಒಟ್ಟು ಅಂದಾಜು ವೆಚ್ಚ ಎಷ್ಟು?

ಆ) ಈ ಯೋಜನೆಯ ಲಾಭವನ್ನು ಪಡೆಯುವ ತಾಲ್ಲೂಕುಗಳು ಯಾವುವು, ಎಷ್ಟು ಎಕರೆ ಭೂಮಿಗೆ ಅನುಕೂಲವಾಗಲಿದೆ.

ಇ) ಈ ಯೋಜನೆ ಯಾವಾಗ ಮುಕ್ತಾಯಗೊಳ್ಳಲಿದೆ?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ತುಂಗ ಮೇಲ್ದಂಡೆ ಯೋಜನೆಯ ಪ್ರಾರಂಭಿಕ ಕೆಲಸಗಳನ್ನು 1992ರಲ್ಲಿ ಪ್ರಾರಂಭಿಸಲಾಗಿದೆ. ನಾಲೆಯ ಮಾದಲ 3ಕಿ.ಮೀ. ಭಾಗದ ಕಾಮಗಾರಿಯ ಅಂದಾಜುನ್ನು ತಯಾರಿಸಿದ್ದು, ಈ ಕೆಲಸಗಳಿಗೆ ಟೆಂಡರ್ ಕರೆಯಲಾಗಿದೆ. ಕ್ರಸ್ಟ್‌ಗೇಟುಗಳನ್ನು ಅಳವಡಿಸುವ ಸಲುವಾಗಿ ಅಣೆಕಟ್ಟನ್ನು ಬಲಪಡಿಸುವ ವಿಚಾರದಲ್ಲಿ ಕರ್ನಾಟಕ ಇಂಜಿನಿಯರಿಂಗ್ ಸಂಶೋಧನಾ ಕೇಂದ್ರದ ವತಿಯಿಂದ ಮಾಡೆಲ್‌ಅಧ್ಯಯನ ನಡೆಸಲಾಗುತ್ತಿದೆ. ಮಂದಗದ್ದೆ ಪಕ್ಷಿಧಾಮದ ಸುರಕ್ಷತೆ ಮತ್ತು ಅರಣ್ಯ ಪ್ರದೇಶದ ಬಿಡುಗಡೆಗೆ ಸಂಬಂಧಿಸಿದಂತೆ ಒಟ್ಟು 21.75 ಲಕ್ಷ ರೂ. ಗಳನ್ನು ಅರಣ್ಯ ಇಲಾಖೆಗೆ ಪಾವತಿ ಮಾಡಲಾಗಿದೆ. 1995ರ ಜನವರಿ ಅಂತ್ಯದವರೆಗೆ ಮಾಡಲಾದ ವೆಚ್ಚ 3.76 ಕೋಟಿ ರೂ. ಗಳು. ಈ ಯೋಜನೆಗೆ ತಗಲುವ ವೆಚ್ಚವನ್ನು 1992-93ನೇ ಸಾಲಿನ ದರಗಳ ಪ್ರಕಾರ 379.87 ಕೋಟಿ ರೂ.ಗಳೆಂದು ಅಂದಾಜು ಮಾಡಲಾಗಿದೆ.

ಆ)

ತಾಲ್ಲೂಕು		ನೀರಾವರಿಗೆ ಒಳಪಡುವ ಕ್ಷೇತ್ರ (ಹೆಕ್ಟೇರುಗಳಲ್ಲಿ)
ಶಿವಮೊಗ್ಗ	:	2,125
ಹೊನ್ನಾಳಿ	:	5,981
ಹರಿಹರ	:	247
ಹಿರೆಕೆರೂರು	:	11,052
ರಾಣೆಬೆನ್ನೂರು	:	43,384
ಹಾವೇರಿ	:	30,280
ಹಾನಗಲ್	:	1,631
ಒಟ್ಟು	:	94,700

ಇ) ಈ ಯೋಜನೆಯನ್ನು ಕ್ರಿ.ಶ. 2000 ಇಸವಿ ಒಳಗೆ ಪೂರ್ಣಗೊಳಿಸುವ ಕಾರ್ಯಕ್ರಮವಿದೆ.

ತುಂಗಾ ಏತ ನೀರಾವರಿ ಯೋಜನೆ.

790 - ಶ್ರೀ ಆಯನೂರು ಮಂಜುನಾಥ (ಹೊಸನಗರ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವೆಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ತುಂಗಾ ಏತ ನೀರಾವರಿ ಯೋಜನೆಯ ಕಾರ್ಯಪ್ರಗತಿಯು ಈಗ ಯಾವ ಹಂತದಲ್ಲಿದೆ;

ಆ) ಈ ಯೋಜನೆಯನ್ನು ಯಾವಾಗ ಪೂರ್ತಿಗೊಳಿಸಲಾಗುವುದು; ಹಾಗೂ ಆದರಿ ವೆಚ್ಚವೆಷ್ಟು;

ಇ) ಈ ಯೋಜನೆಯಿಂದ ಪ್ರಯೋಜನ ಪಡೆಯುವ ರೈತರ ಜಮೀನಿನಿ ವಿಸ್ತೀರ್ಣ ಎಷ್ಟು ?

ಅ) ಈ ಯೋಜನೆಯ ನಿರ್ಮಾಣ ಕಾರ್ಯ ಇನ್ನೂ ಪ್ರಾರಂಭವಾಗಿರುವುದಿಲ್ಲ.

ಆ) ಈ ಯೋಜನೆಯು ತಾಂತ್ರಿಕ ಮತ್ತು ಆರ್ಥಿಕವಾಗಿ ಸಾಧುವಾದಲ್ಲಿ ಕೈಗೆತ್ತಿಕೊಳ್ಳಲು ಕ್ರಮ ತೆಗೆದುಕೊಳ್ಳಲಾಗುವುದು ಅಂದಾಜು ವೆಚ್ಚ ಸುಮಾರು 1250 ಲಕ್ಷರೂ. ಗಳು.

ಇ) ಹಿಂಗಾರಿನಲ್ಲಿ 5162 ಎಕರೆಗಳು ಹಾಗೂ ಮುಂಗಾರಿನಲ್ಲಿ 4870 ಎಕರೆಗಳು ಪ್ರಯೋಜನೆ ಪಡೆಯುತ್ತವೆ.

ರಾಜ್ಯದ ಡಿಸ್ಟಿಲರಿಗಳಿಂದ ಬರುವ ಅದಾಯ

571 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಇರುವ ಒಟ್ಟು ಡಿಸ್ಟಿಲರಿಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿಯನ್ನು ಒದಗಿಸುವುದು.)